ಆರಂಭಿಸಿದ ಮೇಲೆ ಇವನಿಗೆ ವ್ಯಾಪಾರ ಕಡಿಮೆಯಾಯಿತು. ಕೊನೆಗೊಮ್ಮೆ ಅಂಗಡಿ ಬಾಗಿಲು ಹಾಕುವ ಸ್ಥಿತಿ ಬಂತು. ಅವನು ಮತ್ತೆ ಬಡವನಾಗಬೇಕಾಯಿತು. ಅವನು ತುಸು ಎಚ್ಚೆತ್ತುಕೊಂಡಿದ್ದರೆ, ಮೈಮರೆಯದೇ ವ್ಯಾಪಾರದ ಕಡೆಗೆ ಗಮನ ಕೊಟ್ಟಿದ್ದರೆ ಮತ್ತೆ ಬಡವನಾಗುವ ಪರಿಸ್ಥಿತಿ ಬರುತ್ತಿತ್ತೆ?

'ದುಡಿಮೆಯಲ್ಲಿಯೇ ಮೈಮರೆಯಬೇಕು, ಹಣ ಗಳಿಸುವುದು ಮತ್ತು ಅದನ್ನು ಉಳಿಸುವುದೇ ಜೀವನದ ಪರಮ ಉದ್ದೇಶವಾಗಿರಬೇಕು ಎನ್ನುವುದೂ ನನ್ನ ಮಾತಿನ ಭಾವವಲ್ಲ. ಪ್ರಾಮಾಣಿಕವಾಗಿ ಗಳಿಸಿದ ಹಣವನ್ನು ಧರ್ಮ (ದಾನ), ಅರ್ಥ (ವ್ಯಾಪಾರಾಭಿವೃದ್ಧಿ), ಕಾಮ (ಸುಖ) ಮತ್ತು ಆಪತ್ತಿನ ನಿವಾರಣೆ (ಆಪದ್ಧನ) ಎಂಬ ನಾಲ್ಕು ಉದ್ದೇಶಗಳಿಗಾಗಿ ವಿಭಾಗಿಸಿಕೊಳ್ಳಬೇಕು. ಧರ್ಮ ಕಾರ್ಯಕ್ಕೆಂದು ಮೀಸಲಿಟ್ಟ ಹಣವನ್ನು ಎಂದಿಗೂ ನಮ್ಮ ಬಳಿಗೆ ಬಂದು ದಾನ ಮಾಡಿ ಎಂದು ಬೇಡದ ದೀನ–ದಲಿತರ (ಬಡವರು) ಅಭ್ಯುದಯಕ್ಕೆ, ಅನ್ನದಾನ, ಪಿತೃಪೂಜೆ, ದೇವತಾಕಾರ್ಯದಂಥ ಸತ್ಕಾರ್ಯಗಳಿಗೆ ಬಳಸಬೇಕು. ಇಂಥ ಕೆಲಸಗಳಿಗೆ ಪ್ರಚಾರವನ್ನಾಗಲಿ, ಫಲವನ್ನಾಗಲಿ ಅಪೇಕ್ಷಿಸಬಾರದು. ಅರ್ಥದ ಹಣವನ್ನು ಸ್ಥಾನಪ್ರಾಪ್ತಿಗೆ (ಸಮಾಜದಲ್ಲಿ ನಮ್ಮ ಸ್ಟೇಟಸ್ ಹೆಚ್ಚಿಸಿಕೊಳ್ಳುವುದು), ರಾಜನ ವಿಶ್ವಾಸ, ಮಿತ್ರ ಸಂಗ್ರಹ, ಮಕ್ಕಳ ವಿವಾಹ, ಧನದ ವೃದ್ಧಿ, ಅನರ್ಥದ (ಕಷ್ಟ) ನಿವಾರಣೆಗೆ ಬಳಸಬೇಕು. ಕಾಮಕ್ಕೆಂದು ಮೀಸಲಿಟ್ಟ ಹಣವನ್ನು ಶರೀರಪೋಷಣೆ, ವಿಶಿಷ್ಟ ಆಹಾರ, ಮನರಂಜನೆ ಇತ್ಯಾದಿ ಮಾರ್ಗಗಳಲ್ಲಿ ಸುಖ ಅನುಭವಿಸಲು ಬಳಸಬೇಕು. ನಾಲ್ಕನೆಯ ಭಾಗವಾದ ಆಪದ್ಧನವನ್ನು ಮಾತ್ರ ಅನಿವಾರ್ಯ ಸಂದರ್ಭ ಹೊರತುಪಡಿಸಿ ಎಂದಿಗೂ ಖರ್ಚು ಮಾಡಬಾರದು. ಸರ್ಕಾರದಿಂದ ಉಪದ್ರವ, ಬರಗಾಲ, ಕಾಯಿಲೆ, ವೃದ್ಧಾಪ್ಯದ ಸಂದರ್ಭದಲ್ಲಿ ಆಪದ್ಧನ ಬಳಕೆಗೆ ಒದಗುತ್ತದೆ. ಕಷ್ಟಪಟ್ಟು ಗಳಿಸಿದ ಹಣವನ್ನು ಎಲ್ಲ ಶಕ್ತಿ–ಯುಕ್ತಿ ಬಳಸಿ ರಕ್ಷಿಸಿಕೊಳ್ಳಬೇಕು. ಧರ್ಮದ ಕೆಲಸಗಳಿಗೆ ಹಣವೂ ಒಂದು ಸಾಧನ ಎನ್ನುವ ಎಚ್ಚರ ನಮ್ಮಲ್ಲಿ ಸದಾ ಜಾಗೃತವಾಗಿರಬೇಕು.

'ಇತರರ ವಸ್ತುಗಳನ್ನು, ದ್ರವ್ಯವನ್ನು ಕೇಳದೇ ತೆಗೆದುಕೊಳ್ಳಬಾರದು. ಧೀರನಾದವ ಯಾಚಿಸಬಾರದು. ಜೀವನು ಯಾವ ವಿಧದ ಕರ್ಮವನ್ನು ಮಾಡುವನೋ ಅದಕ್ಕೆ ಅನುಗುಣವಾದ ಫಲವನ್ನೇ ಉಪಭೋಗಿಸುವನು. ತಾನು ಮಾಡಿದ ಕರ್ಮದ ಫಲವನ್ನು ತಾನೇ ಅನುಭವಿಸಬೇಕೇ ಹೊರತು ಒಬ್ಬನ ಕರ್ಮದ ಫಲವನ್ನು ಮತ್ತೊಬ್ಬನು ಉಪಭೋಗಿಸಲು ಸಾಧ್ಯವಿಲ್ಲ. ಇವರನ್ನು ನೋಡು, ಇವರಿಗೆ ಸದಾ ತಮ್ಮ ಶರೀರಪೋಷಣೆ ಮತ್ತು ಸುಖದ ಬಗ್ಗೆಯೇ ಆಸಕ್ತಿ. ಪಕ್ಕದ ಮನೆಯವರ ಕಷ್ಟಕ್ಕೆ ಅಯ್ಯೋ ಎನ್ನುವ ಮನಸ್ಸೂ ಸಹ ಇವರಿಗೆ ಇಲ್ಲ. ಇವರ ಕಷ್ಟಕ್ಕೆ ಬೇರೆಯವರು ಸ್ಪಂದಿಸಬೇಕು ಎಂದು ನೀನು ಹೇಗೆ ಬಯಸುತ್ತೀ?

'ಇವರನ್ನು ನೋಡು, ತನ್ನ ಹೆಂಡತಿಗೆ ಆಸಕ್ತಿ ಎಂದು ಬಡವರಿಗೆ ಅಷ್ಟೋ–ಇಷ್ಟೋ ದಾನ ಮಾಡುತ್ತಾರೆ. ಕೊಡೋ ದುಡ್ಡು ಕೊಟ್ಟು ನಂತರ ಹೊಟ್ಟೆ ಉರಿದುಕೊಳ್ಳುತ್ತಾರೆ. ಇವರ ಪರಿಸ್ಥಿತಿ ಏನಾಗುತ್ತೆ ಗೊತ್ತಾ? ತಮ್ಮ ಸುತ್ತಮುತ್ತ ಸಾಕಷ್ಟು ಭೋಗಸಂಪತ್ತು ಇದ್ದರೂ ಇವರಿಗೆ ಅದನ್ನು ಅನುಭವಿಸುವ ಯೋಗ ಇರುವುದಿಲ್ಲ. ಬೇರೆಯವರು ಅನುಭವಿಸುವುದನ್ನು ನೋಡಿ 'ಕಷ್ಟಪಡುವುದು ನಾನು, ಸುಖಪಡುವುದು ಅವರು' ಎಂದು ನಿಟ್ಟುಸಿರು ಬಿಡುವುದು ಇವರ ಬಾಳಾಗುತ್ತೆ. ಆದರೆ ಇನ್ನೂ ಒಂದಷ್ಟು ಜನರಿರುತ್ತಾರೆ. ಅವರ ಮನೆಯಲ್ಲಿ ಬಡತನ ಕಾಲುಚಾಚಿ ಮಲಗಿರುತ್ತೆ. ಯಾವುದೇ ಭೋಗದ ವಸ್ತುಗಳಿಗೆ ಅವರು ಒಡೆಯರಲ್ಲ. ಆದರೆ ಪ್ರತಿದಿನ ಸುಖ ಅವರನ್ನು ಹುಡುಕಿ ಬರುತ್ತೆ. ಊರಿಗೆ ಹೋಗಬೇಕು ಎಂದುಕೊಂಡರೆ ಯಾರೋ ಸಿಕ್ಕಿ ಬಸ್ ಟಿಕೆಟ್ ಕೊಡಿಸುತ್ತಾರೆ, ಯುಗಾದಿಗೆ ಒಬ್ಬಟ್ಟು ತಿನ್ನಬೇಕು ಎಂದುಕೊಂಡರೆ ಯಾರೋ ಬಂದು ಊಟಕ್ಕೆ ಕರೆಯುತ್ತಾರೆ. ಅನಿಶ್ಚಿತ ಬಾಳಿನಲ್ಲಿ ಸುಖಕ್ಕೆ ಕೊರತೆಯಿರುವುದಿಲ್ಲ.

'ಇದಕ್ಕೆ ಕಾರಣ ಏನು ಗೊತ್ತೆ? ಇವರ ಬಳಿ ಹಣಕ್ಕೆ ಬಡತನ ಇರಬಹುದು. ಆದರೆ ಇನ್ನೊಬ್ಬರ ಕಷ್ಟಕ್ಕೆ ಕರಗುವ ಮನಸ್ಸು ಧಾರಾಳವಾಗಿದೆ. ಯಾರದೇ ಮನೆಯಲ್ಲಿ ಸಮಾರಂಭ ಎಂದರೆ, ಊರಿನಲ್ಲಿ ಹಬ್ಬ ಎಂದರೆ ಮುಂದೆ ನಿಂತು ಶ್ರಮದಾನ ಮಾಡುತ್ತಾರೆ. ನಾನು ಇಂತಿಂಥ ಕೆಲಸ ಮಾಡಿದೆ ಎಂದು ಬಹಿರಂಗವಾಗಿ ಹೇಳಿಕೊಳ್ಳುವ ಸ್ವಭಾವ ಇವರದ್ದಲ್ಲ. 'ನನ್ನ ಹತ್ತಿರ ಏನೂ ಇಲ್ಲ, ಕೈಲಾದಷ್ಟು ಕೆಲಸ ಮಾಡಿಕೊಟ್ಟೆ. ದೇವರಿಗೆ ಪ್ರೀತಿಯಾಗಲಿ' ಎಂದು ಪರೋಪಕಾರಕ್ಕಾಗಿಯೇ ತುಡಿಯುವ ಒಳ್ಳೆಯ ಮನಸ್ಸು ಇವರದು. ಮನಸ್ಸಿನಲ್ಲಿ ಇವರು ಅಂದುಕೊಳ್ಳುವ ಮಾತು ನನಗೆ ಕೇಳಿಸದೇ? ಇವರ ಪರಿಶ್ರಮಕ್ಕೆ ತಕ್ಕ ಗೌರವ ಕೊಡಬೇಕು ಎಂದೇ ಇಂಥವರ ಅಗತ್ಯವನ್ನು ನಾನೇ ಅರಿತುಕೊಂಡು ಅದಕ್ಕೆ ಸ್ಪಂದಿಸುವಂತೆ ಅಕ್ಕಪಕ್ಕದವರ ಮನಸ್ಸಿಗೆ ಪ್ರೇರಣೆ ಮಾಡುತ್ತೇನೆ.

'ನೋಡು ಪಾರ್ವತಿ ಇದೇ ಭೂಲೋಕದಲ್ಲಿ ಇನ್ನೂ ಮೂರು ಥರದ ಜನರಿದ್ದಾರೆ. ಎದುರಿಗೆ ಇರುವವರಿಗೆ ಅತ್ಯಗತ್ಯವಾಗಿ ಬೇಕಾದ ವಸ್ತುವೊಂದು ಇವರ ಬಳಿ ಇದೆ. ಉದಾಹರಣೆಗೆ, ಆ ವಸ್ತುವನ್ನು ದೋಸೆ ಹುಯ್ಯುವ ಹೆಂಚು ಎಂದುಕೊ. ಇವರ ಬಳಿ ಅಂಥ ಎರಡು ಹೆಂಚು ಇದೆ, ನೆರೆಮನೆಗೆ ನೆಂಟರು ಬಂದಾಗ ಇವರ ಮನೆಯಲ್ಲಿ ದೋಸೆ ಹಿಟ್ಟು ಸಹ ಇರುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಕೆಲವರು ನೆರೆಯವರ ಕಷ್ಟವನ್ನು ಅರಿತು, ಅವರು ಕೇಳುವ ಮೊದಲೇ ಸ್ಪಂದಿಸುತ್ತಾರೆ. ಅಗತ್ಯ ನೆರವು ನೀಡುವ ಮೂಲಕ ಅವರ ಮಾನ–ಪ್ರಾಣಗಳನ್ನು ಕಾಪಾಡುತ್ತಾರೆ. ಇನ್ನೂ ಕೆಲವರು ನೆರೆಯವರ ಕಷ್ಟ ಅರಿತುಕೊಂಡರೂ, ಅವರು ತಾವಾಗಿಯೇ ಕೇಳುವವರೆಗೂ ಸುಮ್ಮನಿದ್ದು, ಅವರು ಬೇಡಿಕೊಂಡ ನಂತರ ಅಗತ್ಯ ವಸ್ತುಗಳನ್ನು ಒದಗಿಸುತ್ತಾರೆ. ಮತ್ತೊಂದು ವರ್ಗದ ಜನರು ಇರುತ್ತಾರೆ. ಅವರು ನೆರೆಯವರ ಕಷ್ಟ ಅರಿತರೂ, ಅವರು ತಾವಾಗಿಯೇ ಕೇಳಿದರೂ ತಮ್ಮಲ್ಲಿರುವ ವಸ್ತುಕೊಡುವುದಿಲ್ಲ. ತಮ್ಮ ಕಾಠಿಣ್ಯದಿಂದಾಗಿ ನೆರೆಯವರ ಮಾನ ಹರಾಜಾದಾಗ ಸಂತಸ ಅನುಭವಿಸುತ್ತಾರೆ.

'ಪರರ ಕಷ್ಟ ಅರಿತುಕೊಂಡು ನೆರವು ಒದಗಿಸಿದವರ ಅಲ್ಪ ಪ್ರಯತ್ನಕ್ಕೆ ನಾನು ಪ್ರೀತನಾಗಿ ಫಲಗಳನ್ನು ಕೊಡುತ್ತೇನೆ, ಪರರಿಂದ ಬೇಡಿಸಿಕೊಂಡು ಸಹಾಯ ಮಾಡಿದವರೂ ಹೆಚ್ಚು ಕಷ್ಟಪಟ್ಟರೆ ಮಾತ್ರ ಫಲಗಳನ್ನು ಕೊಡುತ್ತೇನೆ, ಪರರ ಕಷ್ಟಕ್ಕೆ ಕರಗದವರ ಪ್ರಯತ್ನಕ್ಕೆ ನಾನೆಂದಿಗೂ ಕರಗುವುದಿಲ್ಲ. ಸಿರಿವಂತರಾಗಿದ್ದ ಅಂಥವರು ಬಡವರಾದರೂ ನಾನು ಕಣ್ಣೆತ್ತಿಯೂ ನೋಡುವುದಿಲ್ಲ.

'ಇನ್ನು ಸಂಸಾರದ ವಿಷಯಕ್ಕೆ ಬರೋಣ ದೇವಿ. ರೂಪ, ಬಣ್ಣ, ಮೈಕಟ್ಟನ್ನು ಕಡೆಗಣಿಸಿ ಕೆಲ ಪುರುಷರನ್ನು ಕಂಡರೆ ಮಹಿಳೆಯರು ಗೌರವದಿಂದ ಆದರಿಸುತ್ತಾರೆ. ಕೆಲವು ಮಹಿಳೆಯರ ಕಷ್ಟಕ್ಕೆ ಪುರುಷರು ತಕ್ಷಣ ಕರಗುತ್ತಾರೆ. ಏಕೆ ಹೀಗೆ ಅಂತ ಎಂದಾದರೂ ಯೋಚನೆ ಮಾಡಿರುವೆಯಾ? ಇದರ ರಹಸ್ಯ ಈಗ ಹೇಳ್ತೀನಿ ಕೇಳು. ಯಾರು ತಮ್ಮ ಪತ್ನಿ/ಪತಿಯ ಅವಗುಣವನ್ನು ಎತ್ತಿ ಆಡುವುದಿಲ್ಲವೋ, ಬೇರೆಯವರ ಎದುರು ತಮ್ಮ ಸಂಗಾತಿಯ ಮಾನ ತೆಗೆಯುವುದಿಲ್ಲವೋ ಅಂಥವರನ್ನು ಇತರರೂ ಗೌರವಿಸುತ್ತಾರೆ, ಆದರಿಸುತ್ತಾರೆ. ತನ್ನ ಹೆಂಡತಿಯನ್ನು ಬೈಯ್ದುಕೊಂಡು ತಿರುಗುವ ಪುರುಷನನ್ನು ಇತರ ಮಹಿಳೆಯರು ಹೀನಾಯವಾಗಿ ಕಾಣುತ್ತಾರೆ. ಹತ್ತು ಜನರಿದ್ದಾಗ ಹೆಂಡತಿಯ (ಸಂಗಾತಿಯ) ಗುಣವರ್ಣನೆ ಮಾಡಬೇಕು, ಏಕಾಂತದಲ್ಲಿ ಲೋಪಗಳನ್ನು ತಿಳಿಸಿಹೇಳಿ ತಿದ್ದಬೇಕು. ಇನ್ನೊಬ್ಬರ ಹೆಂಡತಿ / ಗಂಡನನ್ನು ಕಾಮದ ದೃಷ್ಟಿಯಿಂದ ಎಂದಿಗೂ ನೋಡಬಾರದು. ಆಗ ಸಂಸಾರ ಚೆನ್ನಾಗಿರುತ್ತದೆ.

'ಭೂಲೋಕದಲ್ಲಿರುವ ಎಲ್ಲ ಮನುಷ್ಯರೂ ನಮ್ಮ ಮಕ್ಕಳೇ ಆಗಿದ್ದರೂ ಬುದ್ಧಿವಂತಿಕೆ, ಗ್ರಹಣ ಸಾಮರ್ಥ್ಯದಲ್ಲಿ ವ್ಯತ್ಯಾಸವೇಕೆ ಎಂದು ನೀನೊಮ್ಮೆ ಕೇಳಿದ್ದೆ. ಇಂದು ಅದಕ್ಕೂ ಉತ್ತರ ಹೇಳುತ್ತೇನೆ ಕೇಳು. ಮನುಷ್ಯನಾದವ ಹುಟ್ಟಿನಿಂದ ಸಾಯುವವರೆಗೂ ಜ್ಞಾನ ಸಂಪಾದನೆಗೆ ಪ್ರಯತ್ನ ಮಾಡಬೇಕು. ತಾನು ಅರಿತದ್ದನ್ನು ಇನ್ನೊಬ್ಬರಿಗೆ ನಿರ್ವಂಚನೆಯಿಂದ ಹೇಳಿಕೊಡಬೇಕು. ತನಗೆ ತಿಳಿದಿರುವುದು, ಇನ್ನೊಬ್ಬರಿಗೆ ತಿಳಿದಿಲ್ಲ, ನಾನು ಮಹಾಜ್ಞಾನಿ, ಉಳಿದವರೆಲ್ಲರೂ ಅಜ್ಞಾನಿಗಳು ಎಂದು ಹಂಗಿಸುವವರನ್ನು ಕಂಡರೆ ನನಗೆ ಕೆಂಡದಂಥ ಕೋಪ. ಅಂಥವರ ಗ್ರಹಣ ಶಕ್ತಿಯನ್ನೇ ನಾನು ಹೀರಿಬಿಡುತ್ತೇನೆ. ಗ್ರಹಣ ಶಕ್ತಿಯೇ ಇಲ್ಲದವರು ಏನು ಜ್ಞಾನಾರ್ಜನೆ ಮಾಡಿಯಾರು?

'ಯಾವಾಗ ನನಗೆ ಹೆಚ್ಚು ಸಿಟ್ಟು ಬರುತ್ತದೆ ಎಂಬುದು ನಿನ್ನ ಕುತೂಹಲವಲ್ಲವೇ? ಹೇಳುತ್ತೇನೆ ಕೇಳು. ಮಾಡುತ್ತಿರುವುದು ಪಾಪಕಾರ್ಯವೆಂದು ತಿಳಿದಿದ್ದರೂ, ಅನುದಿನವೂ ಅದೇ ಪಾಪಕರ್ಮವನ್ನೇ ಉದ್ದೇಶಪೂರ್ವಕವಾಗಿ ಮಾಡುವವರನ್ನು ಕಂಡರೆ ನನಗೆ ವಿಪರೀತ ಸಿಟ್ಟು. ಇಂಥವರನ್ನು ನಾನು ಎಂದಿಗೂ ಕ್ಷಮಿಸುವುದಿಲ್ಲ. ಅವರು ಏನು ಮಾಡಿದರೂ ಪಾಪಕ್ಕೆ ಪ್ರಾಯಶ್ಚಿತ್ತ ಸಿಗುವುದಿಲ್ಲ. ಅದರ ಫಲವನ್ನು ಅನುಭವಿಸಿಯೇ ಕಳೆದುಕೊಳ್ಳಬೇಕು. ಅಹಿಂಸೆ, ಪರರಲ್ಲಿ ದಯೆ ನನಗೆ ಪರಮ ಪ್ರೀತಿಯ ವಿಷಯಗಳು. ಇಂಥವರನ್ನು ನಾನು ಎಂದೂ ಬಿಟ್ಟುಕೊಡುವುದಿಲ್ಲ. ಅವರಿಗೆ ನೆರಳಾಗಿ ನಿಂತು ಕಾಪಾಡಿಕೊಳ್ಳುತ್ತೇನೆ'.

(ಆಧಾರ: ಮಹಾಭಾರತ ಅನುಶಾಸನ ಪರ್ವದಲ್ಲಿ ಬರುವ ಉಮಾ–ಮಹೇಶ್ವರ ಸಂವಾದ ಪಠ್ಯ, ಸತ್ಯಾತ್ಮತೀರ್ಥರು ಮತ್ತು ಕಲ್ಲಾಪುರ ಪವಮಾನಾಚಾರ್ಯರ ಪ್ರವಚನ)